**<u>ಮಧ್ಯಂತರ ಅರ್ಜಿ ಸಂಖ್ಯೆ -02 ರ ಕುರಿತಾದ ಆದೇಶ</u>**

ಪ್ರಸ್ತುತ ಈ ಮಧ್ಯಂತರ ಅರ್ಜಿ ಸಂಖ್ಯೆ-02 ನ್ನು ಅರ್ಜಿದಾರರು ದಿವಾನಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 6 ನಿಯಮ 17 ರಡಿಯಲ್ಲಿ ಸಲ್ಲಿಸಿದ್ದು, ಸದರಿ ಅರ್ಜಿಗೆ ಪೂರಕವಾಗಿ ಸಲ್ಲಿಸಿರುವ ಪ್ರಮಾಣಪತ್ರದಲ್ಲಿ ನಮೂದಿಸಿರುವ ಅಂಶಗಳನ್ನು ಪರಿಗಣಿಸಿ ಅರ್ಜಿಯಲ್ಲಿ ನಮೂದಿಸಿರುವ ಪ್ರಸ್ತಾವಿತ ತಿದ್ದುಪಡಿಯ ಅಂಶಗಳನ್ನು ವಾದಪತ್ರದಲ್ಲಿ ತಿದ್ದುಪಡಿ ಮಾಡಲು ಅನುಮತಿ ನೀಡಬೇಕೆಂದು ಕೋರಿ ಸಲ್ಲಿಸಿರುತ್ತಾರೆ.

**2. ಅರ್ಜಿದಾರರು ಅರ್ಜಿಗೆ ಪೂರಕವಾಗಿ ಪ್ರಮಾಣಪತ್ರವನ್ನು ಸಲ್ಲಿಸಿದ್ದು, ತನ್ನ ಪ್ರಮಾಣಪತ್ರದಲ್ಲಿನ ಅಂಶಗಳು ಈ ಕೆಳಗಿನಂತೆ ಇವೆ :**

ತಾನು ಈ ಪ್ರಕರಣದ ಅರ್ಜಿದಾರರಾಗಿದ್ದು, ತನಗೆ ಈ ಪ್ರಕರಣದ ಕುರಿತಾಗಿ ಮಾಹಿತಿ ಇದೆ. ತಾನು ಈ ಪ್ರಕರಣವನ್ನು ಸಲ್ಲಿಸುವ ಕಾಲಕ್ಕೆ ಕಣ್ತಪ್ಪಿನಿಂದಾಗಿ ಹಾಗೂ ನಿಯಂತ್ರಿಸಲಾಗದ ಕಾರಣದಿಂದಾಗಿ ತನ್ನ ವಕೀಲರ ಹೆಸರನ್ನು ತಪ್ಪಾಗಿ ನಮೂದಿಸಿರುತ್ತೆನೆ. ಈ ಮೇಲ್ಕಂಡ ತಪ್ಪು ನಮೂದು ತನಗೆ ಇತ್ತೀಚೆಗೆ ತಿಳಿದು ಬಂದಿರುತ್ತದೆ. ಈ ಮೇಲ್ಕಂಡ ತಪ್ಪು ನಮೂದು ಯಾವುದೇ ದುರುದ್ದೇಶದಿಂದ ಕೂಡಿರುವುದಿಲ್ಲ. ಬದಲಾಗಿ ಸದುದ್ದೇಶದಿಂದ ಕೂಡಿರುತ್ತದೆ. ಹಾಗಾಗಿ ಅರ್ಜಿಯಲ್ಲಿ ನಮೂದಿಸಿರುವಂತೆ ತಿದ್ದುಪಡಿ ಮಾಡಬೇಕೆಂದು ಕೋರಿರುತ್ತೇನೆ. ಈ ಅರ್ಜಿಯನ್ನು ಪುರಸ್ಕರಿಸಿದ್ದಲ್ಲಿ ಎದುರುದಾರರಿಗೆ ಯಾವುದೇ ಹಾನಿಯುಂಟಾಗುವುದಿಲ್ಲ. ಆದರೆ ಈ ಅರ್ಜಿಯನ್ನು ಪುರಸ್ಕರಿಸದಿದ್ದಲ್ಲಿ ನನಗೆ ತುಂಬಲಾರದ ಹಾನಿಯುಂಟಾಗುತ್ತದೆ ಹಾಗೂ ಪ್ರಕರಣದ ಬಾಹುಳ್ಯತೆಗೆ ಕಾರಣವಾಗುತ್ತದೆ. ಆದ್ದರಿಂದ ಸದರಿ ಅರ್ಜಿಯನ್ನು ಪುರಸ್ಕರಿಸಬೇಕೆಂದು ಪ್ರಾರ್ಥಿಸಿಕೊಂಡಿರುತ್ತಾರೆ.

**3. ಎದುರುದಾರರ ಪರ ವಕೀಲರು ಸದರಿ ಅರ್ಜಿಗೆ ಮೇಲ್ಕಂಡ ಮಧ್ಯಂತರ ಅರ್ಜಿಗೆ ಯಾವುದೇ ತಕರಾರು ಸಲ್ಲಿಸಿರುವುದಿಲ್ಲ, ಬದಲಾಗಿ ಸದರಿ ಅರ್ಜಿಯನ್ನು ಪುರಸ್ಕರಿಸಬಹುದು ಎಂದು ಹಿಂಬರಹ ಮಾಡಿರುತ್ತಾರೆ.**

4. **ಮೇಲ್ಕಾಣಿಸಿದ ಸಂಗತಿಗಳನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ ಈ ಕೆಳಕಂಡ ಅಂಶಗಳು ನನ್ನ ಪರಿಶೀಲನೆಗೆ ಉದ್ಭವಿಸಿರುತ್ತವೆ ಃ**

1) ಅರ್ಜಿದಾರರು ಮಧ್ಯಂತರ ಅರ್ಜಿ ಸಂಖ್ಯೆ - 02 ರಲ್ಲಿ ಕೋರಿರುವಂತೆ ಅಂತಿಮ ಡಿಕ್ರಿ ಅರ್ಜಿಯಲ್ಲಿ ತಿದ್ದುಪಡಿ ಮಾಡಲು ಕೋರಿರುವ ಪರಿಹಾರವನ್ನು ಪಡೆಯಲು ಅರ್ಹರೇ?

2) ಹಾಗಿದ್ದಲ್ಲಿ ಯಾವ ಆದೇಶ?

5. ಅರ್ಜಿದಾರರ ಪರ ವಕೀಲರ ವಾದವನ್ನು ಆಲಿಸಲಾಯಿತು.

6. ಮೇಲ್ಕಾಣಿಸಿದ ಅಂಶಗಳಿಗೆ ನನ್ನ ಉತ್ತರ ಈ ಕೆಳಗಿನಂತಿರುತ್ತದೆ ಃ

ಅಂಶ – 1 ಃ ಸಕಾರಾತ್ಮಕವಾಗಿ,

ಅಂಶ – 2 ಃ ಅಂತಿಮ ಆದೇಶದಂತೆ,

**ಕಾ ರ ಣ ಗ ಳು**

7. **ಅಂಶ – 1** ಃ- ಅರ್ಜಿದಾರರು ಪ್ರಸ್ತುತ ಈ ಅಂತಿಮ ಡಿಕ್ರಿ ಅರ್ಜಿಯನ್ನು ಅಸಲು ದಾವಾ ಸಂಖ್ಯೆ 110/1987 ರ ಪ್ರಾಥಮಿಕ ಡಿಕ್ರಿಯಂತೆ ತನ್ನ ಪಾಲಿನ ಪ್ರತ್ಯೇಕ ಹಿಸ್ಸೆ ಮತ್ತು ಸ್ವಾಧೀನತೆಯನ್ನು ಪಡೆಯುವ ಕುರಿತಾಗಿ ಸಲ್ಲಿಸಿರುತ್ತಾರೆ. ಅರ್ಜಿದಾರರು ಸಲ್ಲಿಸಿರುವ ಅಂತಿಮ ಡಿಕ್ರಿ ಅರ್ಜಿ, ಮಧ್ಯಂತರ ಅರ್ಜಿ ಹಾಗೂ ಕಡತದಲ್ಲಿನ ದಾಖಲಾತಿಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಯಿತು.

8. ಅರ್ಜಿದಾರರ ಪರ ವಕೀಲರು ಮಧ್ಯಂತರ ಅರ್ಜಿಯ ಕುರಿತು ವಾದ ಮಂಡನೆಯ ಕಾಲಕ್ಕೆ ಅರ್ಜಿದಾರರ ಪರ ವಕೀಲರ ಹೆಸರನ್ನು ನಮೂದು ಮಾಡುವ ಕಾಲಕ್ಕೆ ಅಂತಿಮ ಡಿಕ್ರಿ ಅರ್ಜಿಯಲ್ಲಿ ಕಣ್ತಪ್ಪಿನಿಂದ ಹಾಗೂ ನಿಯಂತ್ರಿಸಲಾಗದ ಕಾರಣದಿಂದ ತಪ್ಪು ನಮೂದು ಏರ್ಪಟ್ಟಿದ್ದು, ಹಾಗಾಗಿ ಅರ್ಜಿದಾರರ ಪರ ವಕೀಲರ ಹೆಸರನ್ನು ಸರಿಪಡಿಸಿಕೊಳ್ಳಲು ತಿದ್ದುಪಡಿ ಮಾಡಲು ಅನುಮತಿ ನೀಡಬೇಕೆಂದು ಕೋರಿರುತ್ತಾರೆ. ಸದರಿ ತಿದ್ದುಪಡಿಯಂತೆ ಕೆ. ಆರ್. ಶಿವಶಂಕರಪ್ಪ ಎಂಬುದನ್ನು ಎಂ. ಬಸವರಾಜು ಎಂಬುದಾಗಿ ನಮೂದು ಮಾಡಲು ಕೋರಿರುತ್ತಾರೆ. ಎದುರುದಾರರ ಪರ ವಕೀಲರು ಸದರಿ ಅರ್ಜಿಯನ್ನು ಪುರಸ್ಕರಿಸಬಹುದು ಎಂದು ಹೇಳಿರುತ್ತಾರೆ.

9. ಅರ್ಜಿದಾರರು ಪ್ರಸ್ತುತ ಮಧ್ಯಂತರ ಅರ್ಜಿಯನ್ನು ಅಂತಿಮ ಡಿಕ್ರಿ ಅರ್ಜಿಯ ತಿದ್ದುಪಡಿಗಾಗಿ ಸಲ್ಲಿಸಿದ್ದು, ಆದ್ದರಿಂದ ಈ ಕುರಿತು ದಿವಾನಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 6 ನಿಯಮ 17ನ್ನು ಪರಿಶೀಲಿಸಲಾಗಿರುತ್ತದೆ. ಸದರಿ ಕಾನೂನಿನ ಪರಿಕಲ್ಪನೆಯನ್ನು ಪರಿಶೀಲಿಸಿದಾಗ ಯಾವುದೇ ಒಂದು ವಾದ ಪ್ರತಿವಾದ ಪತ್ರದ ತಿದ್ದುಪಡಿ ಅರ್ಜಿಯನ್ನು ಸಾಕ್ಷ್ಯ ಪ್ರಾರಂಭವಾಗುವುದಕ್ಕಿಂತ ಮೊದಲು ಸಲ್ಲಿಸಬೇಕಾಗುತ್ತದೆ ಎಂದು, ಒಂದೊಮ್ಮೆ ಸಾಕ್ಷ್ಯ ಪ್ರಾರಂಭವಾದ ನಂತರದಲ್ಲಿ ಸಲ್ಲಿಸಿದಲ್ಲಿ ಸದರಿ ಅರ್ಜಿಯನ್ನು ಈ ಮೊದಲು ಸಲ್ಲಿಸಲು ಎಲ್ಲಾ ರೀತಿಯ ಜಾಗೃತಿಯನ್ನು ತೆಗೆದುಕೊಂಡಿದ್ದಾಗ್ಯೂ ಸಲ್ಲಿಸಲು ಸಾಧ್ಯವಾಗಲಿಲ್ಲ ಎಂದು ನ್ಯಾಯಾಲಯಕ್ಕೆ ಮನವರಿಕೆ ಮಾಡಿಕೊಟ್ಟಲ್ಲಿ ನ್ಯಾಯಾಲಯವು ಅಂತಹ ಅರ್ಜಿಯನ್ನು ಪುರಸ್ಕರಿಸಬಹುದು ಎಂದು ಉಲ್ಲೇಖಿಸಿರುತ್ತದೆ. ಈ ಕುರಿತು ಪರಿಶೀಲಿಸಿದಾಗ ಅರ್ಜಿದಾರರು ಸಲ್ಲಿಸಿರುವ ಅರ್ಜಿಯನ್ನು ಅಂತಿಮ ಡಿಕ್ರಿ ಅರ್ಜಿಯ ಪ್ರಾರಂಭಿಕ ಹಂತದಲ್ಲೆ ಸಲ್ಲಿಸಿರುವುದು ಸ್ಪಷ್ಟವಾಗಿ ಕಂಡು ಬರುತ್ತದೆ. ಎಲ್ಲಕ್ಕಿಂತ ಮುಖ್ಯವಾಗಿ ಅರ್ಜಿದಾರರ ಪರವಾಗಿ ಪ್ರಸ್ತುತ ಈ ಪ್ರಕರಣದಲ್ಲಿ ಎಂ. ಬಸವರಾಜುರವರು ವಕಾಲತ್ತನ್ನು ಸಲ್ಲಿಸಿರುವುದು ಕಡತದಲ್ಲಿನ ದಾಖಲಾತಿಗಳನ್ನು ಪರಿಶೀಲಿಸಲಾಗಿ ಕಂಡು ಬರುತ್ತದೆ. ಹಾಗಾಗಿ ಅರ್ಜಿದಾರರು ಸಲ್ಲಿಸಿರುವ ಅರ್ಜಿಯನ್ನು ಪುರಸ್ಕರಿಸುವ ಅಗತ್ಯತೆ ಇದೆ ಎಂದು ನ್ಯಾಯಾಲಯಕ್ಕೆ ಕಂಡು ಬರುತ್ತದೆ. ಆದ್ದರಿಂದ ಅರ್ಜಿದಾರರು ಪ್ರಸ್ತಾವಿತ ತಿದ್ದುಪಡಿಯಲ್ಲಿ ಕೋರಿರುವ ತಿದ್ದುಪಡಿಯನ್ನು ಪುರಸ್ಕರಿಸುವುದು ಸೂಕ್ತವೆಂದು ನಿರ್ಣಯಿಸಲಾಗುತ್ತದೆ. ಆದ್ದರಿಂದ ಈ ಮೇಲ್ಕಂಡ ಎಲ್ಲಾ ಅಂಶಗಳನ್ನು ಪುರಸ್ಕರಿಸಿ ಅಂಶ 1 ನ್ನು ಸಕಾರಾತ್ಮಕ ಎಂದು ನಿರ್ಣಯಿಸಲಾಗುತ್ತದೆ.

10. <u>ಅಂಶ – 2</u> ಃ ಈ ಮೇಲ್ಕಾಣಿಸಿದ ಎಲ್ಲಾ ಕಾರಣಗಳಿಂದಾಗಿ ಕೆಳಗಿನಂತೆ ಆದೇಶಿಸಿರುತ್ತೇನೆ ಃ

**<u>ಃಆ ದೇ ಶಃ</u>**

ಅರ್ಜಿದಾರರು ದಿವಾನಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 6 ನಿಯಮ 17 ಸಹವಾಚಕ ಕಲಂ 151ರ ಅಡಿಯಲ್ಲಿ ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ - 02 ನ್ನು ಪುರಸ್ಕರಿಸಲಾಗಿದೆ.

ಖರ್ಚಿನ ಬಗ್ಗೆ ಯಾವುದೇ ಆದೇಶವಿಲ್ಲ.

ಪ್ರಕರಣವನ್ನು ಅಂತಿಮ ಡಿಕ್ರಿ ಅರ್ಜಿಯ ತಿದ್ದುಪಡಿಗಾಗಿ ಹಾಗೂ ತಿದ್ದುಪಡಿ ವಾದಪತ್ರವನ್ನು ಸಲ್ಲಿಸಲು ನಿಗದಿಪಡಿಸಿ ದಿನಾಂಕ 23.06.2021 ಕ್ಕೆ ಮುಂದೂಡಲಾಗಿದೆ.

(ಈ ಆದೇಶವನ್ನು ಶೀಘ್ರಲಿಪಿಗಾರರಿಗೆ ನೇರವಾಗಿ ಗಣಕಯಂತ್ರದ ಮೂಲಕ ಉಕ್ತಲೇಖನ ಕೊಟ್ಟು, ಅವರು ಬೆರಳಚ್ಚು ಮಾಡಿದ ನಂತರ ಓದಿ, ತಪ್ಪುಗಳನ್ನು ತಿದ್ದಿ ಬಹಿರಂಗ ನ್ಯಾಯಾಲಯದಲ್ಲಿ ದಿನಾಂಕ 01 ನೇ ಜೂನ್ 2021 ರಂದು ನಾನು ಉದ್ಘೋಷಿಸಿದ್ದೇನೆ.)

(ರಘುರಾಮ.ಎನ್.ಎಸ್.)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ., ಕಡೂರು.